ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು [ನಂ. 15.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 16, ಸ್ ೧೮೯೬.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರಜಿಸ್ಟ್ರೇರ್ಷ ವ ಯಡ್ಮಿನಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಮತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಅಕ್ಷ್ಪಗಳು ವ ರೆಗ್ಯುಲೇಷ್ಗಳು.—ಇಲ್ಲ.

4ನೇ ಭಾಗ—ಸರ್ಕಾರ ಕಾಗದ ಪತ್ರಗಳು.—ಇಲ್ಲ.

ಗಮನಿಸಿ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 9ನೇ ಏಪ್ರೆಲ್ 1896.

ನಂ. 274.—ಮೈಸೂರ ಡಿ. ಸಿ. ಘರಷನೇ ರಾಜಪ್ರತ್ರಿಯರಾದ ಕೃಷ್ಣಾಜಮ್ಮಣ್ಣಿಯವರನ್ನು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್‌ನ ಲೆಫ್ಟಿನೆಂಟ್ ಕರ್ನಲ್‌ರಾದ ಜೆ. ದೇವರಾಜರಸಿನವರಿಗೆ ಕೊಟ್ಟು ಬಳಸುವ ವಿವಾಹ ಮಹೋತ್ಸವದ ಮರ್ಯಾದಾರ್ಥವಾಗಿ 1896ನೇ ಇಸವಿ ಏಪ್ರೆಲ್ 20ನೇ ತಾರೀಖು ಸೋಮವಾರದ ದಿವಸ ಈ ಕೀಳೆಯ ತವಾಂ ಪಬ್ಲಿಕ್ ಆಫಿಸ್‌ಗಳೂ, ಕೋರ್ಟುಗಳೂ ಮತ್ತು ಸ್ಕೂಲ್‌ಗಳೂ ಬರಖಾಸ್ತು ಮಾಡಲ್ಪಡತಕ್ಕದ್ದು.

ನಂ. 275.—ಮೈಸೂರ್ ಡಿ. ಸಿ. ಘನವನ್ನು ಹೊಂದಿದ ಮೈಸೂರು ಶ್ರೀಮತ್ ಮಹಾರಾಜ ಕೃಷ್ಣರಾಜ ಒಡೆಯರ್ ಬಹದೂರ ವರ ಉಪನಯನ ಮಹೋತ್ಸವದ ಮರ್ಯಾದಾರ್ಥವಾಗಿ 1896ನೇ ಇಸವಿ ಏಪ್ರೆಲ್ 29ನೇ ತಾರೀಖು ಬುಧವಾರದ ದಿವಸ ಈ ಕೀಳೆಯ ತವಾಂ ಪಬ್ಲಿಕ್ ಆಫಿಸ್‌ಗಳೂ, ಕೋರ್ಟುಗಳೂ ಮತ್ತು ಸ್ಕೂಲ್‌ಗಳೂ ಬರಖಾಸ್ತು ಮಾಡಲ್ಪಡತಕ್ಕದ್ದು.

ತಾರೀಖು 31ನೇ ಮಾರ್ಚ್, 1896.

ನಂ. 11154.–ಲೋ. ಫಂ. 257–92, ಸ್ ೧೮೯೪ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷ್ನ್ ರೆಗ್ಯುಲೇಷನಿನ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ–ಇದರಡಿ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಚಿತ್ರದುರ್ಗ ಮ್ಯುನಿಸಿಪಾಲಿಟಿಯಲ್ಲಿ ಕೊಳ್ಳೇಗಾಲದ ಶಾಮಯ್ಯಂಗಾರ್ರ ಮನೆ ಪಕ್ಕದಲ್ಲಿ ಬಂದು ಈಸದ ತೊಟ್ಟಿಯನ್ನು ಕಟ್ಟುವ ಬಗ್ಯಾಗಿ ಆವಶ್ಯಕವಾಗಿರುತ್ತೆ:–

ನಂಬರು.	ಜಿಲ್ಲೆ ಹೆಸರು.	ಹಿಡುವಳಿದಾರ್ರ ಹೆಸರು.	ಬೇಕಾದ ವಿಸ್ತೀರ್ಣ. ಬಾಬ್ತು.	ರುಜು.	ವಿವರಣೆ.	ಚಕ್ಕುಬಂದಿ. ಉತ್ತರ	ದಕ್ಷಿಣ.	ಪೂರ್ವ.	ಪಶ್ಚಿಮ.
			ಗೆಜಗಳು						
1	ನಂಜೇಬಾಗಲು ರಸ್ತೆ	ಕೊಳ್ಳೇಗಾಲದ ಶಾಮಯ್ಯಂಗಾರ್ ಮತ್ತು ಗರುಡಾಚಾರ್, ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫಿಸ್ ರೆವಿನ್ಯೂ ಅಕೌಂಟೆಂಟ್.	3	3	ಖಾಲಿ ಪಿತ್ರಲ್	ರಾಷ್ಟ್ರೋಂದ್ರ ಸ್ಕೂಲಿಂದ ಮುಂದ ರಸ್ತೆ	ಸ್ವಂತಗಾರ್ರ ಮನೆ.	ಸಂತೇಬಾಗಲಿಂದ ಹುಚ್ಚಂಗಿದೇವಸ್ಥಾನಕ್ಕೆ ಹೋಗುವ ಹಳ್ಳಿರೋಡು.	ಸ್ವಂತಗಾರ್ರ ಹಿತ್ತಲಿನ ಉಳಿದ ಭಾಗ.

ತಾರೀಖು 2ನೇ ಏಪ್ರೆಲ್ 1896.

ನಂ. 11271.—ಯಲ್. ಯಫ್. 197—92, ಸೆಸ್ಟರ್ ಕೃಷ್ಣಸ್ವಾಮಿಐರ್ ಬಿ. ಏ. ಮತ್ತು ಯಲ್. ಸಿ. ಯಿ. ಯವರು ಮೈಸೂರು ಸಿಟಿ ಮ್ಯುನಿಸಿಪಾಲಿಟಿಯು ಯಾಗ್ಜಿ ಕ್ಯೂಟಿವ್ ಯಿಂಜಿನೀಯರಾಗಿ ಬಂದು ವರುಷಪರಿಯಂತ ಅಜವಾಯಿಷೀ ತಕೀಕ್ ಮೊಕ ರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 4ನೇ ಏಪ್ರೆಲ್ 1896.

ನಂ. 11295.—ಲೋ. ಫಂ. 257—92, ಲ್ಯಾಂಡ್ ಅಕ್ವಿಜಿಷ್ನ್ ರೆಗ್ಯುಲೇಷ್ನ್ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ,–ಈ ಕೆಳಗಿನ ಪಟ್ಟಿಯಲ್ಲಿ ತೋರಿಸಿಯಿರುವ ಜಮೀನ್ಗಳು ಸರ್ಕಾರದ ಕೆಲಸಕ್ಕೆ ಅಂದರೆ ಕೋಲಾರ ಡಿಸ್ಟ್ರಿಕ್ಟ್ ಬಾಗೇಪಲ್ಲಿ ತಾಲ್ಲೂಕು ಬಾಗೇಪಲ್ಲಿ ಟವ್ನ್ ಬಡಾಯಿಸುವದಕ್ಕಾಗಿ ಬೇಕಾಗಿರುತ್ತೆ:–

ನಂಬರು.	ಸರ್ವೇ ನಂಬರು.	ಖಾತೇದಾರನ ಹೆಸರು.	ಪಟ್ಟಜಮೀನಿನ ವಿಸ್ತೀರ್ಣ. ವಿಸ್ತೀರ್ಣ	ಕುಂದಾಯ.	ಹೊಂದಲ್ಪಡತಕ್ಕ ಜಮೀನು. ವಿಸ್ತೀರ್ಣ.	ಕುಂದಾಯ.	ಸರಹದ್ದು. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು. ಗೂ. ಆ. ಪೈ.		ಎ. ಗು. ಗೂ. ಆ. ಪೈ.					
1	ಖುಷ್ಕಿ ನಂ. 160ರ ಪೈಗುಣ	ಶಂಕರೆ ನಾ	3—31	5 12 0	1—20	2 4 0	ಫಕ್ಕುಸಾಹೇಬನ ಕುಂದಾಯದ ಭೂಮಿ	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರ್ರ ಯಿನಾಮತಿ	ರಸ್ತೆ	ಖಾತೇದಾರನ ಜಮೀನು.
2	(ಖುಷ್ಕಿ) ಪುಟ್ಟಾಚಾರಿ ನಂ. 159	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರಿ	1—38	3 0 0	0—20	0 12 0	ಕಂಕರೆ ನಾಗಂಣನ ಕುಂದಾಯದ ಭೂಮಿ	ಸುಣ್ಣಹಳ್ಳುವೆಂಕಟಣ್ಣನ ಕುಂದಾಯದ ಭೂಮಿ.	ರಸ್ತೆ	ಡಿಟೋ.
3	ಖುಷ್ಕಿ ನಂ. 153ರ ಪೈ	ಸುಣ್ಣಹಳ್ಳು ವೆಂಕಟಿಗಾ	1—11	2 0 0	0—18	0 10 9	ಪುಟ್ಟಾಚಾರಿ ರಾಮಾಚಾರಿ ಮತ್ತು ವೇದಾಂತಾಚಾರ್ರ ಇನಾಮತಿ	ಕೋಡಿ ಚರುವು ಹನುಮಂತನ ಕುಂದಾಯದ ಭೂಮಿ ಮತ್ತು ಸರ್ಕಾರದ ಖಾಲೀ ಜಮೀನು	ರಸ್ತೆ	ಡಿಟೋ
4	ಡಿಟೋ	ಕೋಡಿಚರುವು ಹನುಮಂತ (ಅನುಭವದಾರ್ ನರಸಿಹ್ಮ)	3—12	5 0 0	0—15	0 9 0	ಸುಣ್ಣಹಳ್ಳುವೆಂಕಟಣ್ಣನ ಕುಂದಾಯದ ಭೂಮಿ	ಖಣಿ ಮತ್ತು ಬಾಕಿ ಜಮೀನು ಬಂಜರು ಜಮೀನು	ಸರ್ಕಾರದ	ಡಿಟೋ

ತಾರೀಖು 4ನೇ ಏಪ್ರಿಲ್ 1896.

ನಂ. 11304.—ಯಜ್ಯುಕೇರ್ಷ. 357, ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಆದ ಮೆಸ್ಟರ್ ವಿ. ಪಿ. ಮಾಧವರಾಯರವರು, ರಾಜೀನಾಮೆಕೊಟ್ಟ ಮೆಸ್ಟರ್ ಪಿ. ಯಸ್. ಕೃಷ್ಣಮೂರ್ತಿಗಳಿಗೆ ಬದಲಾಗಿ ಘನವನ್ನು ಹೊಂದಿದ ಮೈಸೂರು ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಮ್ಯಾನೇಜಿಂಗ್ ಕಮ್ಮಿಟಿಯ ಪ್ರೆಸಿಡೆಂಟರಾಗಿ ನೊಕರ್ಮಾಡಲ್ಪಟ್ಟಿರುತ್ತಾರೆ.

ನಂ. 11323.—ಜೆ. 1252, ಕಡೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರಾದ ಮೆಸ್ಟರ್ ಡಿ. ಏ. ಬಾಲಾರ್ಯುಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇರ್ಷಗಳ 188ನೇ ಆರ್ಟಿಕಲ್ ಅನುಸಾರವಾಗಿ ಯರಡು ತಿಂಗಳು ವ ಏಳುದಿವಸಗಳ ಪ್ರಿವಿಲೀಜು ರಜಾವನ್ನು ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಮಂಜೂರು ಮಾಡಲ್ಪಟ್ಟಿರುತ್ತೆ.

ಸದರೀ ಯುವರ ಗೈರ್‌ಹಾಜರಿಯಲ್ಲಿ ಪೊಲೀಸ್ ಸೂಪರ್‌ಟೆಂಡೆಂಟರಾದ ಮೆಸ್ಟರ್ ಜಿ. ಡನಿಂಗ್‌ಯವರು ಕಡೂರು ಡಿಸ್ಟ್ರಿಕ್ಟಿನ ಪೊಲೀಸ್ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 7ನೇ ಏಪ್ರಿಲ್ 1896.

ನಂ. 11371.—ಜೆ. 1261, ಬೆಂಗಳೂರು ಶಿಟಿ ಮೇಜಸ್ಟ್ರೇಟಾದ ಮೆಸ್ಟರ್ ಪಸ್. ವೈದ್ಯನಾಥಯ್ಯನವರಿಗೆ ಮೈಸೂರು ಸರ್ವಿಸ್ ರೆಗ್ಯುಲೇರ್ಷಗಳ 172ನೇ ಆರ್ಟಿಕಲ್ ಅನುಸರಿಸಿ 1896ನೇ ಇಸವಿ ಏಪ್ರಿಲ್ 13ನೇ ಮಂಗಳವಾರಾಭ್ಯ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಎಂಭತ್ತು ದಿವಸಗಳ ಕ್ಯಾಜುಯಲ್ ರಜಾ ಮಂಜೂರ್‌ಮಾಡಲ್ಪಟ್ಟಿರುತ್ತೆ.

ತಾರೀಖು 13ನೇ ಏಪ್ರಿಲ್ 1896. ಕ್ಯಾಂಪ್, ಮೈಸೂರ್.

ನಂ. 11570.—ಮಿ. ಎಫ್. 5–90, ಮಾಹೆ ಮಜಕೂರ 6ನೇ ತಾರೀಖು ಪೂರ್ವಾನ್ವದಲ್ಲಿ ಮೈಸೂರ ಗವರ್ಮೆಂಟ್ ಮಿಲಿಟೇರಿ ಸೆಕ್ರಟೆರಿಯರ ಉದ್ಯೋಗದ ಚಾರ್ಜನ್ನು ಲೆಫ್ಟಿನೆಂಟ್ ಕರ್ನಲ್ ಜೆ. ದೇವರಾಜ ಅರಸಿನವರು ಬಿಟ್ಟುಸಿ, ಲೆಫ್ಟಿನೆಂಟ್ ಕರ್ನಲ್ ಎ. ಎಚ್. ಮೆಕ್ಕಂಟೈರ್‌ವರವರು ವಹಿಸಿದರು.

ತಾರೀಖು 14ನೇ ಮಾರ್ಚಿ 1896.

ನಂ. 8435.—ಆರ್. 3279, (1888ನೇ ಇಸವಿ IVನೇ ರೆಗ್ಯುಲೇರ್ಷ) ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷರ್ 2ನೇ ಪ್ಯಾರಾ ಅನುಸರಿಸಿ ನಾಗಮಂಗಲದ ತಾಲ್ಲೂಕು ಜೋಡಿ ಸಿವನಹಳ್ಳಿ ಗ್ರಾಮಕ್ಕೆ ಸದರೀ ಕೋಡಿನ VIII ಮತ್ತು IXನೇ ಅಧ್ಯಾಯಗಳ ನಿಯಮಗಳು ಲಗಾವಾಗಬೇಕೆಂದು ಮೈಸೂರ ಸರ್ಕಾರವರು ಆಜ್ಞಾಪಿಸಿರುತ್ತಾರೆ.

ತಾರೀಖು 21ನೇ ಮಾರ್ಚಿ 1896.

ನಂ. 8722.—ಯಾಕ್ಸ್. 264.—1881ನೇ ಇಸವಿ XXIIನೇ ನಂಬರ್ ಯಕ್ಸೈಜ್ ಆಕ್ಟ್ 55ನೇ ಸೆಕ್ಷರ್ ನಿಯಮಗಳನುಸರಿಸಿ ಮೈಸೂರು ಗವರ್ಮೆಂಟಿನವರು ಆಜ್ಞಾಪಿಸುವದೇನಂದರೆ:—ಕೇಂದಿ ಇಜಾರೆದಾರ್ ಮತ್ತು ಕೇಂದಿ ದುಕಾನ್‌ದಾರರುಗಳಿಗೆ ಕೊಡಲ್ಪಡುವ ಲೈಸೆನ್ಸುಗಳ ಷರತ್ತುಗಳಲ್ಲಿ ಇದರಡಿ ಕಂಡ ತಿದ್ದುಪಾಟುಗಳು ಕೇರಿಸಲ್ಪಡತಕ್ಕದ್ದು.

1893ನೇ ಇಸವಿ ಜನವರಿ 14ನೇ ಮತ್ತು ನಂ 11813—ರೆ. ಫೈ. 233—92ನೇ ನಂಬರ್ ಇಸ್ತಿಹಾರ್‌ನಾಮೆಯ A ಅರ್ಪೆಡಿಕ್ಸ್ ಆದ ಕೇಂದಿ ಇಜಾರೆದಾರರ ಲೈಸೆನಿಸ 21ನೇ ಕಲಂನಲ್ಲಿ,—

"ಕೇಂದಿಯು ಗಿಡಗಳಿಂದ ಇಳಿಸಲ್ಪಟ್ಟಂತೆ ಜನಗಳಿಗೆ ಬಿಕರೀ ಮಾಡಲ್ಪಡತಕ್ಕದ್ದು, ಮತ್ತು ಬಲ ತಗ್ಗಿಸಲ್ಪಡಕೂಡದು ಮತ್ತು "ಪರಿಕೆ ಮಾಡಲ್ಪಡಕೂಡದು" ಯಂಬದಕ್ಕೆ ಬದಲಾಗಿ ಇದರಡಿ ಬರುವದನ್ನು ಕೇರಿಸತಕ್ಕದ್ದು:—

"ಬಲ ತಗ್ಗಿಸಲ್ಪಟ್ಟ ಅಥವಾ ಪರಿಕೆ ಮಾಡಲ್ಪಟ್ಟ ಕೇಂದಿಯಾಗಲೀ ಅಥವಾ ಯರಡು ದಿವಸಗಳಿಗೆ ಮುಂಚಿತವಾಗಿ ಇಳಿಸಲ್ಪಟ್ಟ "ಕೇಂದಿಯಾಗಲಿ ಬಿಕರಿ ಮಾಡಲ್ಪಡಕೂಡದು ಯಾ ಬಿಕರಿ ಬಗ್ಯೆ ಕೊಡಲ್ಪಡಕೂಡದು ಅಥವಾ ದುಕಾನಿನಲ್ಲಿ ಇಡಲ್ಪಡಕೂಡದು."

2. 1893ನೇ ಇಸವಿ ಜನವರಿ 14ನೇ ಮತ್ತು ನಂ 11813.—ರೆ. ಫೈ. 233—92ನೇ ನಂಬರ್ ಇಸ್ತಿಹಾರ್‌ನಾಮೆ B ಅರ್ಪೆಡಿಕ್ಸ್ ಆದ ಕೇಂದಿ ಟಿಲ್ಲರೆ ವಾಯಾಟದ ಲೈಸೆನಿಸ 4ನೇ ಷರತ್ತಿನಲ್ಲಿ ಬರುವ ಮೊದಲನೇ ವಾಕ್ಯವಾದ ಇದರಡಿ ಕಾಣಿಸಿರುವದಕ್ಕೆ ಅಂದರೆ:—

"ಬಲತಗ್ಗಿಸಲ್ಪಟ್ಟ ಯಾ ಪರಿಕೆ ಮಾಡಲ್ಪಟ್ಟ ಕೇಂದಿಯಾಗಲಿ ಅಥವಾ ಎರಡು ದಿವಸಗಳಿಗೆ ಮುಂಚಿತವಾಗಿ ಉತಾರ್ ಮಾ "ಡಲ್ಪಟ್ಟ ಕೇಂದಿಯಾಗಲಿ ಬಿಕರಿ ಮಾಡಲ್ಪಡಕೂಡದು." ಎಂಬದಕ್ಕೆ ಬದಲಾಗಿ.

"ಬಲ ತಗ್ಗಿಸಲ್ಪಟ್ಟ ಅಥವಾ ಪರಿಕೆ ಮಾಡಲ್ಪಟ್ಟ ಕೇಂದಿ ಆಗಲಿ ಅಥವಾ ಎರಡು ದಿವಸಗಳಿಗೆ ಮುಂಚಿತವಾಗಿ ಉತಾರ್ ಮಾಡ "ಲ್ಪಟ್ಟ ಕೇಂದಿ ಆಗಲಿ ಬಿಕರಿ ಮಾಡಲ್ಪಡಕೂಡದು ವ ಬಿಕರೀ ಬಗ್ಯೆ ಕೊಡಲ್ಪಡಕೂಡದು. ಮತ್ತು ದುಕಾನುಗಳಲ್ಲಿ ಇಡಲ್ಪಡಲೂ ಕೂಡದು" ಎಂಬ ಮಾತುಗಳನ್ನು ಕೇರಿಸತಕ್ಕದ್ದು.

ತಾರೀಖು 24ನೇ ಮಾರ್ಚಿ 1896.

ನಂ. 8758.—ಆರ್. 3394, 1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷರ್ ನಿಯಮಗಳನುಸರಿಸಿ ಯಿದರಿಂದ ಪ್ರಕಟಿಸಲ್ಪಡುವದೇನಂದರೆ,—ಈ ಕೆಳಗೆ ನಮೂದಿಸಿರುವ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಕೋಲಾರದಲ್ಲಿ ಡೆಪ್ಯುಟಿ ಕಮ್ಮಿಷನರವರ ಹೊಸ ಬಂಗಲೆಯ ಕಾಂಪೌಂಡಿಗಾಗಿ ಬೇಕಾಗಿಯಿರುತ್ತೆ.

ತಿಪ್ಪಸಂದ್ರ ಹೋಬಳಿ.	ಕೋಲಾರ ತಾಲ್ಲೂಕು.	ಕೋಲಾರ ಜಿಲ್ಲೆ.	ಗ್ರಾಮದ ಹೆಸರು.	ಖಾತೇದಾರರ ಹೆಸರು.	ಸರ್ವೇ ಸೆಟಲ್‌ಮೆಂಟಿಗೆ ಪೂರ್ವದ ಹಳೇ ಲೆಖ್ಕಗಳ ಪ್ರಕಾರ ಜಮೀನಿನ ತಪ್ಶೀಲ್.				ಚಕ್ಕುಬಂದಿ.			
					ನಂಬರು.	ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಖಂ. ಕೊ. ಪ.	ರೂ. ಆ. ಪೈ				
ಕೋಲಾರ	ಕೋಲಾರ	ಕೋಲಾರ	ಟೇರ್ಸ್	ಗೋವಿಂದರಾಜ ಪಿಳ್ಳೆ (ಅನುಭವದಾರ ತಿಮ್ಮಾ ಮೇಸ್ತ್ರಿ).	ಖುಷ್ಕಿ 603 ಖುಷ್ಕಿ 605	0—0—2 0—0—10½	0-1-9 0-9-2	ಮಾಜಿ ನಂ. 602 ತೋಟ	ಮಾಜಿ ನಂ. 604 ಬಂಜರು	ಮಾಜಿ ನಂ. 605 ಪಲ್ಲಿಗಳುಂಟಿ	ಮಾಜಿ ನಂ. 599 ಸರ್ಕಾರದ ಬಂಜರು
				ವಾನಂಬಾಡಿ ಬಸಪ್ಪ (ಅನುಭವದ್ವಾರ ತಿಮ್ಮಾ ಮೇಸ್ತ್ರಿ).	ಖುಷ್ಕಿ 605	0—0—7¾	0-6-11	ಮಾಜಿ ನಂ. 606 ಬಂಜರು	ಮಾಜಿ ನಂ. 598 ರಸ್ತೆ	ಮಾಜಿ ನಂ. 486 ಚರಂಡಿ	ಮಾಜಿ ನಂ. 602, 603 ಮತ್ತು 604 ಬಂಜರು

ತಾರೀಖು 26ನೇ ಮಾರ್ಚಿ 1896.

ನಂ. 8947.—ಯಕ್ಸ್. 274, 1892ನೇ ಇಸವಿ ಮಾರ್ಚಿ 30ನೇ ಮಕ್ತುಂ 495ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ ನಾಮೆಯ 5ನೇ ರೂಲಿನ 4ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರದಿರುವದನ್ನು ಕೇರಿನತಕ್ಕದ್ದು.

"ಹಳ್ಳೀ ಸಾರಾಯಿ ಅಂದರೆ 10 ದಿವಸಗಳು ಯಾ ಅದಕ್ಕೆ ಜಾಸ್ತಿ ಕಾಲದ ಸಾರಾಯಿಯು ಡಿಸ್ಟಿಲೇರಿಯಿಂದ ಯಾವಾಗ್ಯೂ ಕೊ
"ಡಲ್ಪಟ್ಟು 50 ಮೈಲಿ ಫಾಸಲೆ ಒಳಗೆ ಇರತಕ್ಕ ಡಿಪೋಗಳಿಗೆ 20° ಡಿಗ್ರಿ ಅಂಡರ್ ಪ್ರೂಫಿಗೆ ಪ್ಯಾಸ್ ಮಾಡಲ್ಪಡತಕ್ಕದ್ದು ಮತ್ತು
"ಡಿಸ್ಟಿಲೇರಿಯಿಂದ 50 ಮೈಲಿಗಳಿಗಿಂತ ಜಾಸ್ತಿ ಫಾಸಲೆ ಇರತಕ್ಕ ಡಿಪೋಗಳಿಗೆ 19·5 ಡಿಗ್ರಿ ಅಂಡರ್‌ಪ್ರೂಫ್ ಒಳ್ಳ ಸಾರಾಯಿಯು
"ಪ್ಯಾಸ್ ಮಾಡಲ್ಪಟ್ಟು 20° ಡಿಗ್ರಿ ಅಂಡರ್‌ಪ್ರೂಫಿಗೆ ಚಾರ್ಜು ಮಾಡಲ್ಪಡತಕ್ಕದ್ದು. ಪರಂತು ದಾಸ್ತ್ ಇಲ್ಲದ ಸಬಬಿನಿಂದ ಅಥವಾ
"ಮತ್ತಾವ ಕಾರಣದಿಂದಲಾದರೂ ಅಂಥಾ ಹಳೇ ಸಾರಾಯಿ ಇಲ್ಲದೆ ಇದ್ದು ಹೊಸ ಸಾರಾಯಿ ಅಂದರೆ 10 ದಿವಸಕ್ಕಿಂತ ಕಮ್ಮಿ ದಿವಸ
"ದ ಸಾರಾಯಿ ಕೊಡಬೇಕಾದ ಅವಶ್ಯಕ ಕಂಡುಬಂದರೆ ಅಂಥಾ ಹೊಸ ಸಾರಾಯಿಯು ಡಿಸ್ಟಿಲೇರಿಯಿಂದ 50 ಮೈಲಿಗಳಿಗಿಂತ ಕಮ್ಮಿ
"ಫಾಸಲೆಯಲ್ಲಿರುವ ಡಿಪೋಗಳಿಗೆ 19·5° ಅಂಡರ್‌ಪ್ರೂಫ್ ಡಿಗ್ರಿಗೆ ಪ್ಯಾಸ್ ಮಾಡಲ್ಪಡತಕ್ಕದ್ದಲ್ಲದೆ 50 ಮೈಲಿಗಿಂತ ಜಾಸ್ತಿ ಫಾಸಲೆಯಲ್ಲಿ
"ರುವ ಡಿಪೋಗಳಿಗೆ 19° ಡಿಗ್ರಿ ಅಂಡರ್‌ಪ್ರೂಫಿಗೆ ಪ್ಯಾಸ್ ಮಾಡಲ್ಪಟ್ಟು 20° ಡಿಗ್ರಿ ಅಂಡರ್ ಪ್ರೂಫಿಗೆ ಚಾರ್ಜ್ ಮಾಡಲ್ಪಡತಕ್ಕದ್ದು."

ತಾರೀಖು 30ನೇ ಮಾರ್ಚಿ 1896.

ನಂ. 8966.—ಲ. ಎಫ್. 99—95, ಶ್ರೀರಂಗಪಟ್ಟಣದ ಡೆಪ್ಯೂಟಿ ಅಮಲ್ದಾರ್‌ರಾಯದ ಡಿ. ಸುಬ್ಬರಾಯರಿಗೆ, 1896ನೇ ಇಸವಿ ಜನವರಿ 28ನೇ ಮಕ್ತುಂ 6851—ಆರ್. 2672ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ಹತ್ತು ದಿವಸಗಳ ಕ್ಯಾಜುಯಲ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 8969.—ಆರ್. ಎಫ್. 100—95, ಪುಂಡ್ಯದ ತಾಲ್ಲೂಕು ಅಮಲ್ದಾರ್‌ರಾಯದ ವಿ. ಎ. ಗುರುರಾಯರಿಗೆ, 1896ನೇ ಇಸವಿ ಫಿಬ್ರವರಿ 10ನೇ ಮಕ್ತುಂ 8279—ಆರ್. 3204ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ಮೂರು ದಿವಸಗಳ ಕ್ಯಾಜುಯಲ್ ರಜಾವು ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಇನ್ನೂ ಏಳು ದಿವಸಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ.

ಅಮಲ್ದಾರ್ರು ರಜಾದಮೇಲೆ ಸೈರ್ ಹಾಜರಿರುವ ಕಾಲದಲ್ಲಿ ತಾಲ್ಲೂಕು ಶಿರಸ್ತೇದಾರ್ರು ತಾಲ್ಲೂಕಿನ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 2ನೇ ಏಪ್ರಿಲ್ 1896.

ನಂ. 9037.—ಆರ್. ಎಫ್. 104—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 173ನೇ ಆರ್ಟಿಕಲ್ ಅನುಸರಿಸಿ ತುಮಕೂರು ತಾಲ್ಲೂಕು ಅಮಲ್ದಾರ್‌ರಾಯದ ಮಹಮ್ಮದ್ ರಜಾಯವರಿಗೆ, 1896ನೇ ಇಸವಿ ಮಾರ್ಚಿ 28ನೇ ತಾರೀಖು ಲಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನವರೆಗ್ಯೂ ಹದಿನೈದು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಮಹಮ್ಮದ್ ರಾಜಾಯವರು ರಜಾದಮೇಲೆ ಸೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರಿಗೂ ತುಮಕೂರು ತಾಲ್ಲೂಕು ಪೋಲೀಸ್ ಇನ್‌ಸ್ಪೆಕ್ಟರಾದ ನಾಗೇಶ್ವರಯ್ಯನವರು ತುಮಕೂರು ತಾಲ್ಲೂಕು ಅಮಲ್ದಾರ್ ಮತ್ತು ಮೂರನೇ ಕ್ಲಾಸು ಮಾಜಿಸ್ಟ್ರೇಟರಾಗಿ ಹಂಗಾಮಿ ತರೀಕೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 9094.—ಆರ್. ಎಫ್. 107—95,—ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್ದಾರ್ರಾದ ವೆಂಕಟಾಚಲಯ್ಯನವರು, 1896ನೇ ಇಸವಿ ಮಾರ್ಚ್ 10ನೇ ತಾರೀಖಿನ ದಿನ ಬಂದು ದಿವಸದ ಕ್ಯಾಜುಯಲ್ ರಜಾ ಕೊಡಲ್ಪಟ್ಟರು.

ನಂ. 9097.—ಆರ್. ಎಫ್. 103—95,—ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ ಮಾಗಡೀ ತಾಲ್ಲೂಕು ಅಮಲ್ದಾರ್ ಎಂ. ವಿ. ತಿರುಮಲಾಚಾರ್ರವರು, 1896ನೇ ಇಸವಿ ಮಾರ್ಚ್ 25ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಅಮಲ್ದಾರ್ರು ರಜಾದವೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತರ ತಾಲ್ಲೂಕು ಶಿರಸ್ತೇದಾರ್ರು ತಾಲ್ಲೂಕಿನ ಚಾಲ್ತೀ ಕೆಲಸದ ಚಾರ್ಜಿನಲ್ಲಿ ಇರತಕ್ಕದ್ದು.

ನಂ. 9101.—ಆರ್. ಎಫ್. 105—95,—ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 188ನೇ ಸೆಕ್ಷನ್ ಅನುಸರಿಸಿ ತಿಪಟೂರು ತಾಲ್ಲೂಕು ಅಮಲ್ದಾರ್ ಬಿ. ಸೀತಾರಾಮಯ್ಯನವರು, 1896ನೇ ಇಸವಿ ಏಪ್ರೆಲ್ ಮೂಹೆ ಗುರ್ಯೇ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖು ಲಾಗಾಯತು ವಂದು ತಿಂಗಳು ಮತ್ತು ಐದು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಬಿ. ಸೀತಾರಾಮಯ್ಯನವರು ರಜಾದವೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರಿಗೂ ತುರವೇಕೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು ಅವರ ಸ್ವಂತ ಕೆಲಸಗಳೊಂದಿಗೆ ತಿಪಟೂರು ತಾಲ್ಲೂಕಿನ ಅಮಲ್ದಾರ್ ಮತ್ತು ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಹಂಗಾಮಿ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 9108.—ಆರ್. 3524,—ಹಜೂರ್ ಹೆಡ್ ಶಿರಸ್ತೇದಾರ್ರಾದ ವೆಸ್ಟ್ರ್ ಸಿ. ರಾಮಯ್ಯರವರು, 1896ನೇ ಇಸವಿ ಜನವರಿ 30ನೇ ಮಾರ್ಚ್ಂ 6781—ಆರ್. 2623ನೇ ನಂಬರ್ ಗವರ್ನ್‌ಮೆಂಟ್ ಇನ್ಸ್ಟ್ರಾಕ್ಷನ್ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟ ಯಾರಡು ತಿಂಗಳುಗಳ ಪ್ರಿವಿಲೀಜ್ ರಜಾವನ್ನು 1896ನೇ ಇಸವಿ ಫಿಬ್ರವರಿ 5ನೇ ಮಾರ್ಚ್ಂ ಲಾಗಾಯತು ಉಪಯೋಗಿಸಿಕೊಂಡು ಮೂಹೆ ಮಜಕೂರ್ 2ನೇ ತಾರೀಖಿನ ಪೂರ್ವಾನ್ಹದಲ್ಲಿ ಕೆಲಸದವೇಲೆ ವಾಪಸ್ ಬಂದಿರುತ್ತಾರಾಗಿ ಅವರು ಉಪಯೋಗಿಸಿಕೊಳ್ಳದ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 9111.—ಆರ್. ಎಫ್. 108—96,—ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ರಾದ ಹೆಚ್. ಆರ್. ಶ್ರೀನಿವಾಸರಾಯರು, 1896ನೇ ಇಸವಿ ಏಪ್ರಿಲ್ 6ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಅಮಲ್ದಾರ್ರು ರಜಾದವೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರ್ರು ಅವರ ಕೆಲಸಗಳ ಜೊತೆಗೆ ತಾಲ್ಲೂಕಿನ ಚಾಲ್ತೀ ಕೆಲಸವನ್ನು ವಹಿಸಿರತಕ್ಕದ್ದು.

ನಂ. 9114.—ಆರ್. ಎಫ್. 102—95,—ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ ನೆಲಮಂಗಲ ತಾಲ್ಲೂಕು ಅಮಲ್ದಾರ್ ಸಿ. ರಾಜಗೋಪಾಲಯ್ಯಂಗಾರ್ರು, 1896ನೇ ಇಸವಿ ಏಪ್ರಿಲ್ ಗುರ್ಯೇ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖು ಲಾಗಾಯತು ಐದು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಅಮಲ್ದಾರ್ರು ರಜಾದವೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರ್ರು ತಾಲ್ಲೂಕಿನ ಚಾಲ್ತೀ ಕೆಲಸಗಳನ್ನು ವಹಿಸಿರತಕ್ಕದ್ದು.

ತಾರೀಖು 6ನೇ ಏಪ್ರೆಲ್ 1896.

ನಂ. 9151.—ಆರ್. ಎಫ್. 110—95,—ಮೈಸೂರ ಸರ್ವಿಸ್ ರೆಗ್ಯುಲೇಷ್ಣಗಳ 188ನೇ ಆರ್ಟಿಕಲ್ ಅನುಸರಿಸಿ ಹುಣಸೂರು ತಾಲ್ಲೂಕು ಅಮಲ್ದಾರ್ ಮಿರ್ ನೈಜಾಮುದ್ದೀನ್ ಅಲ್ಲಿಬ್ಬಾಯವರು 1896ನೇ ಇಸವಿ ಏಪ್ರೆಲ್ 2ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಅಮಲ್ದಾರ್ರು ರಜಾದವೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರ್ರು ಅವರ ಕೆಲಸಗಳ ಜೊತೆಗೆ ತಾಲ್ಲೂಕಿನ ಚಾಲ್ತೀ ಕೆಲಸಗಳನ್ನು ವಹಿಸಿರತಕ್ಕದ್ದು.

ಮೈಸೂರ ಕ್ಯಾಂಪ್: ನಂ. 97, ತಾರೀಖು 13ನೇ ಏಪ್ರೆಲ್ 1896.

1896ನೇ ಇಸವಿ ಮಾರ್ಚ್ 6ನೇ ಮಾರ್ಚ್ಂ 8032—ಎಕ್ಸ್. 245ನೇ ನಂಬರು ಮತ್ತು ಅದೇ ಮೂಹೆ 5ನೇ ಮಾರ್ಚ್ಂ 8030—ಎಕ್ಸ್. 243ನೇ ನಂಬರು ಇಸ್ತಿಹಾರುಗಳಲ್ಲಿ ಮೈಸೂರು ಡಿಸ್ಟ್ರಿಕ್ಟ್‌ಗೆ ಕೇರಿದ ಯಡತೊರೆ, ಹುಣಸೂರು, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಮತ್ತು ತಿರುಮಕೂಡ್ಲು ನರಸೀಪುರ ಈ ತಾಲ್ಲೂಕುಗಳೆ ಬಾಬತ್ತು 1896-97ನೇ ಸಾಲಿನ ಸಂರಾಯಿ ಬಿಕರಿ ಗುತ್ತಿಗೆ ಫಿರಖ್ತಾಗಳ ಮತ್ತು ಕೇಂದಿ ಫಿರಖ್ತಾಗಳ ಪರಾಜು ಬಗ್ಗೆ ಮೊಕರರು ಮಾಡಲ್ಪಟ್ಟಿರುವ ತಾರೀಖುಗಳಿಗೆ ಬದಲಾಗಿ ಇದರಡಿ ನಮೂದಿಸೋಣವಾದ ತಾರೀಖುಗಳಲ್ಲಿ ಪರಾಜು ಕ್ರಮ ನಡಿಸಲ್ಪಡುವದು:—

ತಾಲ್ಲೂಕು.	ಪರಾಜು.	ಕೇಂದಿ.
ಯಡತೊರೆ ..	1896ನೇ ಮೇ ತಾ॥ 23.	1896ನೇ ಮೇ ತಾ॥ 23.
ಹುಣಸೂರು ..	ಡಿಟೋ 25.	ಡಿಟೋ 25 ಮತ್ತು 26.
ಹೆಗ್ಗಡದೇವನಕೋಟೆ ..	ಡಿಟೋ 27.	ಡಿಟೋ 27.
ಗುಂಡ್ಲುಪೇಟೆ ..	ಡಿಟೋ 29.	ಡಿಟೋ 29 ಮತ್ತು 30.
ಚಾಮರಾಜನಗರ ..	ಡಿಟೋ 31.	ಡಿಟೋ 31 ಮತ್ತು ಜೂನ್ ತಾ॥ 1.
ಯಳಂದೂರು ..	1896ನೇ ಜೂನ್ ತಾ॥ 2.	ಡಿಟೋ ಡಿಟೋ
ತಿರುಮಕೂಡ್ಲು ನರಸೀಪುರ ..	ಡಿಟೋ 3.	1896ನೇ ಜೂನ್ ತಾ॥ 3 ಮತ್ತು 4.

ಮೈಸೂರು ಸರ್ಕಾರದಿಂದ ಕೊಡೋಕ್ಕಾದ ಇಸ್ತಿಹಾರ್‌ನಾಮೆ.

ನಂಬರ್ 8550—ಯ. 260.

ತಾರೀಖು 18ನೇ ಮಾರ್ಚ್ 1896.

ಇದರಿಂದ ಪ್ರಕಟಪಡಿಸುವದೇನಂದರೆ, 1896 ನೇ ಇಸವಿ ಜುಲೈ ಗುರ್ಯೇ ತಾರೀಖು ಲಾಗಾಯತು 1897ನೇ ಇಸವಿ ಜೂರ್ 30ನೇ ತಾರೀಖಿಗೆ ಪೂರೈಸುವ 12 ತಿಂಗಳ ಕಾಲದಲ್ಲಿ ಇಜಾರೇದಾರ್ರ ಕೈಕೆಳಗಿನ ಆಂ ಗಡೀವಾರ್ರಿಂದ ಜನಗಳಿಗೆ ಮತ್ತು ಬ್ಲೇಕರ್ಸ್ ಯಾನೆ ರೊಟ್ಟಿ ಕಾರಖಾನೆಯವರಿಗೆ ಉಜಲು ಮಾರದ ಕೇಂದಿಯು ಇದರಣಿ ನಮೂದಿಸಿರುವ ಮೇರೆ ಚಿಲ್ಲರೇ ದರಗಳಿಗೆ ಮಾರಲ್ಪಡತಕ್ಕದ್ದು:—

ಜಿಲ್ಲೆ	ಸ್ಥಳ.	ಬಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಬಂದಕ್ಕೆ ಖರೀದಿ. ಉತ್ತಮ.	ಕನಿಷ್ಟ.	ಕೊಪ್ಪಲ್‌ಕಾರಖಾನೆಯವರಿಗೆ ಮಾರಲು ಬಂದಕ್ಕೆ ಖರೀದಿ.
ಬೆಂಗಳೂರು.	ಸಿವಿಲ್ ವ ಮಿಲಿಟೆರಿ ಸ್ಟೇಷ್ಟ ಮತ್ತು ಪೇಟೆ	0 1 6	0 1 0	0 1 0
	ತಾಲ್ಲೂಕು ಕಸಬಾಗಳು	0 1 3	0 0 10	
	ಮೈಸೂರ್ ಡಿಸ್ಟ್ರಿಕ್ಟಿನ ಬಾಜೂದಲ್ಲಿರುವ ಗ್ರಾಮಗಳು, ಅಂದರೆ:— ಚೆನ್ನಪಟ್ಟಣದ ತಾಲ್ಲೂಕಿಗೆ ಶೇರಿದ ಇಗ್ಗಲೂರು, ಗೀಜಗವಾನ ದೊಡ್ಡಿ, ಜೆಗದಾಪುರ, ಕುಕ್ಕೂರು, ಪೊರಗನಹಳ್ಳಿ, ದಾಮನಗುಂಡು, ಮತ್ತು ಅರಳಾಪುರ ಎಂಬುವ ಗ್ರಾಮಗಳು ಕಾನಕಾನಹಳ್ಳಿ ತಾಲ್ಲೂಕಿಗೆ ಶೇರಿದ ನಾತನೂರು ಮತ್ತು ಹಲನೂರು ಎಂಬುವ ಗ್ರಾಮಗಳು	0 0 6	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ	0 1 0	0 0 8	
	ತಾಲ್ಲೂಕು ಕಸಬಾಗಳು	0 1 3	0 0 10	
ಕೋಲಾರ	ಕೋಲಾರಿಗೆ ಶೇರಿದ ದಿಂಬ, ಬವರಿಂಗುಪ್ಪೇಟೆಗೆ ಶೇರಿನ ನೇರನಹಳ್ಳಿ, ಚಿಕ್ಕಬಳ್ಳಾಪುರಕ್ಕೆ ಶೇರಿದ ರಂಗಸ್ಥಳ, ಗೌರೀಬಿದನೂರಿಗೆ ಶೇರಿದ ಗುಂಡಾಪುರ, ಚಿಕ್ಕಕುರುಗೋಡು, ಹಿರೇಬಿದನೂರು, ಗೊಟ್ಟಗನಪುರ ಮತ್ತು ಕಲ್ಲೂಡಿ, ಮತ್ತು ಬಾಗೇಪಲ್ಲಿಗೆ ಶೇರಿದ ಗಂಟಂವಾರಿಪಲ್ಲಿ, ಹೊಸಕೋಟೆ ಮತ್ತು ಮಲ್ಲಸಂದ್ರ ಎಂಬ ಗ್ರಾಮಗಳಲ್ಲಿ	0 1 3	0 0 10	
	ಇತರ ಎಲ್ಲಾ ಗ್ರಾಮಗಳಲ್ಲಿ	0 1 0	0 0 8	
ತುಮಕೂರು.	ಹುಳಿಯಾರ್ ಸಬ್ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ :	0 0 8	0 0 6	
	ಶಿರಾ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ	0 1 3	0 0 6	
	ಇತರ ಎಲ್ಲಾ ತಾಲ್ಲೂಕು ಕಸಬಾಗಳಲ್ಲಿ	0 1 3	0 0 10	
	ಕುಣಿಗಲ್ ತಾಲ್ಲೂಕಿಗೆ ಶೇರಿದ ಹುಳಿಯಾರದುರ್ಗ, ಪುರ ಮತ್ತು ಕೋಡವಟ್ಟಿ ಎಂಬ ಗ್ರಾಮಗಳಲ್ಲಿ	0 0 6	0 0 4	
	ಹುಳಿಯಾರು ಸಬ್ ತಾಲ್ಲೂಕಿನ ಗ್ರಾಮಗಳಲ್ಲಿ	0 0 6	0 0 4	
	ಶಿರಾತಾಲ್ಲೂಕಿನ ಗ್ರಾಮಗಳಲ್ಲಿ	0 1 0	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ	0 1 0	0 0 8	
ಮೈಸೂರು.	ಮೈಸೂರ ಟೌನ್	0 1 0	0 0 10	
	ಮೈಸೂರು ತಾಲ್ಲೂಕಿಗೆ ಶೇರಿದ ಹೊಸಕೊಳ, ಹಾರೋಹಳ್ಳಿ, ವರುಣ, ಪುತ್ತಹಳ್ಳಿ ಮತ್ತು ಕುಪ್ಪಗಾಲ ಎಂಬ ಗ್ರಾಮಗಳು	0 0 8	0 0 4	
	ಮೈಸೂರು ತಾಲ್ಲೂಕಿಗೆ ಶೇರಿದ ಚಾಮುಂಡಿ ಮತ್ತು ಉತ್ತನಹಳ್ಳಿ ಜಾತೆಗಳಲ್ಲಿ	0 1 0	0 0 8	
	ಮೈಸೂರು ತಾಲ್ಲೂಕಿಗೆ ಶೇರಿದ ಕಲಸವಾಡಿ, ನುಚ್ಚಹಳ್ಳಿ, ರಾಂಪಹಳ್ಳಿ, ಕುಟಿಗರ ಕಟ್ಟೆ ಮತ್ತು ಅಮ್ಮನವರಕೊಳ ಎಂಬ ಗ್ರಾಮಗಳಲ್ಲಿ	0 1 0	0 0 10	
	ಮೈಸೂರು ತಾಲ್ಲೂಕಿಗೆ ಶೇರಿದ ಭೂಗನಹಳ್ಳಿ, ಕೆಂಚಲಗೂಡು, ಮರಟಿಕ್ಯಾತನಹಳ್ಳಿ ಮತ್ತು ಗಣಂಗೂರ ಹುಂಡಿ ಎಂಬ ಗ್ರಾಮಗಳಲ್ಲಿ	0 0 10	0 0 8	
	ಹೆಗ್ಗಡದೇವನಕೋಟೆ ಕಸಬ	0 0 10	0 0 4	
	ಮೂಗಡಿಹಳ್ಳಿ ಕಾಡುಗ್ರಾಮದಲ್ಲಿ	0 1 0	0 0 8	
	ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಶೇರಿದ ಸರಗೂರು, ಕಿತ್ತೂರು, ಮರ್ಕಳ್ಳು ಮಸ್ಕೆ, ಸೋಗೆರೆ, ಅಂತ್ಯಸಂತೆ, ನೇರಳೆ, ಎಲ್ಲಮತ್ತೂರು ಕಾರೇಪುರ, ಮತ್ತು ಗಿಣಿನೆ ಎಂಬ ಗ್ರಾಮಗಳಲ್ಲಿ	0 0 8	0 0 6	

ಜಿಲ್ಲೆ ಕ್ರಮ	ಸ್ಥಳ	ಬಂದು ಇಂಪೀರಿಯಲ್ ಕ್ವಾರ್ಟಿಗೆ ಸವುವಾದ ಕೇರು ಬಂದಕ್ಕೆ ಖರೀದಿ. ಉತ್ತಮ.	ಕನಿಷ್ಟ.	ರೊಟ್ಟುಕಾರಣನೆಯು ದರಗೆ ಕೇರು ಬಂದಕ್ಕೆ ಗೊತ್ತು ಪಡಿಸಿದ ಖರೀದಿ.
ಮೈಸೂರು	ಹೆಗ್ಗಡ ದೇವನಕೋಟೆ ತಾಲ್ಲೂಕಿಗೆ ಕೇರಿದ ಚಿಕ್ಕಳ್ಳಿ, ಮತ್ತಿಕೆರೆ, ಎಡತೊರೆ ಮತ್ತು ಹರಿಹಳ್ಳಿ, ಎಂಬ ಗ್ರಾಮಗಳು	0 0 10	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ	0 0 8	0 0 4	
	ಹುಣಸೂರು ಕಸಬ	0 0 10	0 0 6	
	ಹುಣಸೂರು ತಾಲ್ಲೂಕಿಗೆ ಕೇರಿದ ದಾಸಕೆರೆ, ಹನಗೂಡು, ಹೆಬ್ಬೂರು, ಬಿಳಿಕೆರೆ ಮಸನಿಕಟ್ಟೆ, ಬಿಟ್ಟನಹಳ್ಳಿ, ಪಿಜಾಜಿಗುರ್ಕೆ, ಕಂಪ್ಲಾಪುರ, ಚಿಲ್ಕುಂದ, ಅತ್ತಿಕುಪ್ಪೆ, ಬಿಟ್ಟದಪುರ, ಅತ್ತಿಗೋಪಸಂತೆ, ಇವುರವಳ್ಳಿ, ಸೂಲೆಕೋಟೆ, ಚಾಮರಾಜಕೋಟೆ, ಕನ್ಯಗೊಳ್ಳಿ, ಆನೆಚೌಕೂರು, ಪಂಜವಳ್ಳಿ ಮಟ್ಟೂರು ಆವೆರ್ತಿಕೋಟೆ ಮತ್ತು ಸತ್ತಿಗಾಲ ಎಂಬ ಗ್ರಾಮಗಳು	0 0 8	0 0 4	
	ಹುಣಸೂರು ತಾಲ್ಲೂಕಿಗೆ ಕೇರಿದ ಬಿಟ್ಟದಪುರದ ಜಾತ್ರೆಗಳಲ್ಲಿ	0 0 10	0 0 8	
	ಹುಣಸೂರು ತಾಲ್ಲೂಕಿಗೆ ಕೇರಿದ ಕಟ್ಟೆಮಳಲವಾಡಿ, ಕಲ್ಲಬೆಟ್ಟ, ಹೊನ್ನೇನಹಳ್ಳಿ ಮತ್ತು ಬನ್ನಿಕುಪ್ಪೆ ಎಂಬ ಗ್ರಾಮಗಳಲ್ಲಿ	0 0 10	0 0 6	
	ಶ್ರೀರಂಗಪಟ್ಟಣ ಕಸಬ	0 0 10	0 0 6	
	ಶ್ರೀರಂಗಪಟ್ಟಣ ತಾಲ್ಲೂಕಿಗೆ ಕೇರಿದ ದರಸಕುಪ್ಪೆ ಹಿರೋಡು ಬಿಟ್ಟಹಳ್ಳಿ ಆರಕೆರೆ ಕೊಡಿಯಾಲ ಮತ್ತು ಹಾರಲಹಳ್ಳಿ ಎಂಬ ಗ್ರಾಮಗಳಲ್ಲಿ	0 0 8	0 0 4	
	ಶ್ರೀರಂಗಪಟ್ಟಣದ ತಾಲ್ಲೂಕಿನ ಮೇಲುಕೋಟೆ ಜಾತ್ರೆಯಲ್ಲಿ	0 1 0	0 0 8	
	ಶ್ರೀರಂಗಪಟ್ಟಣದ ತಾಲ್ಲೂಕಿನ ಪಾಲಹಳ್ಳಿ ಸುಲ್ತಾನ್‌ಪೇಟೆ ಪಶ್ಚಿಮವಾಹಿನಿ ಬಳಗೊಳ ಬಳವಾಡಿ ಕ್ಯಾತನಹಳ್ಳಿ ಕಬ್ಬಿಸಬೋರೆ ಕಿರಂಗೂರು ಮತ್ತು ಗಂಜಾಂ ಎಂಬುವ ಗ್ರಾಮಗಳಲ್ಲಿ	0 0 10	0 0 6	
	ಎಳಂದೂರು ಕಸಬ	0 0 10	0 0 6	
	ಎಳಂದೂರು ಜಹಗೀರಿಗೆ ಕೇರಿದ ಆಗರ ಮಾಂಬಳ್ಳಿ ಹೊಳಕೆರೆ ಮತ್ತು ಹೊರಳಕೆರೆ ಎಂಬುವಗ್ರಾಮಗಳಲ್ಲಿ	0 0 8	0 0 4	
	ತಿರುಮಕೂಡ್ಲು ನರಸೀಪುರದ ಕಸಬ	0 0 10	0 0 6	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಚಾಹಳ್ಳಿ ಹರುಷಾರ ಮತ್ತು ಕೆಂಪನಪುರ ಎಂಬ ಗ್ರಾಮಗಳಲ್ಲಿ	0 0 8	0 0 4	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಅಂಕನಹಳ್ಳಿ ಹನುಮನಾಳು ಬಿಟ್ಟಹಳ್ಳಿ ಕೊಲದೂರು ಕೊನ್ನಾಯ್ಕನಹಳ್ಳಿ ಬಿದರವಹಳ್ಳಿ ನರಗತನಹಳ್ಳಿ ಹೆಬ್ಬಟ್ಟವಹಳ್ಳಿ ಹೊರಳಹಳ್ಳಿ ಭೂಹಳ್ಳಿ ಕೆರನಸೂರು ಕೆರ್ಕತಿ ಮಟಲು ಮದರಹಳ್ಳಿ ಕನ್ನಹಳ್ಳಿ ಬಿಟ್ಟಹಳ್ಳಿ ತೂಬವಾಡಿ ದೊಡ್ಡಹರ ಮಾವಿನಹಳ್ಳಿ ತಾಟಗೂಳು ದೊಡ್ಡಬಾಗಲು ಹುಣಸಗಳ್ಳಿ ತಂಗಹಳ್ಳಿ ಕರಗಹಳ್ಳಿ ಕುಪ್ಪೆ ತಂಬಳ್ಳಿ ಮುದರ್ತಿ ಮತ್ತು ಯಾಕನೂರು ಎಂಬ ಗ್ರಾಮಗಳಲ್ಲಿ	0 0 8	0 0 6	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಇತರ ಎಲ್ಲಾ ಗ್ರಾಮಗಳಲ್ಲಿ	0 0 10	0 0 6	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಮುದುಕತೊರೆ ಮತ್ತು ಮೂಗೂರು ಎಂಬ ಜಾತ್ರೆಗಳಲ್ಲಿ	0 0 10	0 0 8	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಕೇರಿದ ಅರವಟ್ಟಿಗೆ ಕೊಪ್ಪಲು ಜಾತ್ರೆ	0 0 10	0 0 6	
	ಇತರ ಚಿಲ್ಲರೆ ಜಾತ್ರೆಗಳಲ್ಲಿ	0 0 10	0 0 4	
	ಚಾಮರಾಜನಗರ ಕಸಬ	0 0 10	0 0 6	
	ಚಾಮರಾಜನಗರ ತಾಲ್ಲೂಕಿನ ರಾಮಸಮುದ್ರ ದೊಡ್ಡರಾಯಪೇಟೆ ಮಾದಳ್ಳಿ ಕಾಡಳ್ಳಿ ಮಲ್ಲಿಪುರ ಉತ್ತಹಳ್ಳಿ ಮತ್ತು ಸೋಮವಾರಪೇಟೆ ಎಂಬ ಗ್ರಾಮಗಳಲ್ಲಿ	0 0 10	0 0 6	
	ಕೃಷ್ಣರಾಜಪೇಟೆ ಮತ್ತು ನಾಗಮಂಗಲ ತಾಲ್ಲೂಕು ಕಸಬಾಗಳಲ್ಲಿ	0 1 0	0 0 6	
	ಕೃಷ್ಣರಾಜಪೇಟೆ ತಾಲ್ಲೂಕಿನ ಅಗ್ರಹಾರ ಬಾಣಹಳ್ಳಿ ಮುರಕನಹಳ್ಳಿ ಮತ್ತು ಹೊಸಹೊಳಲು ಎಂಬ ಗ್ರಾಮಗಳಲ್ಲಿ	0 1 0	0 0 6	
	ನಾಗಮಂಗಲ ತಾಲ್ಲೂಕಿನ ಪೂಲಗ್ರಹಾರ ಕೋಟೆಬೆಟ್ಟ ಮತ್ತು ಬೊಮ್ಮದಳ್ಳಿ ಎಂಬ ಗ್ರಾಮಗಳಲ್ಲಿ	0 1 0	0 0 6	
	ನಾಗಮಂಗಲ ತಾಲ್ಲೂಕಿನ ಬೆಲ್ಲೂರು ನೆಲ್ಲಿಗೆರೆ ಕಾಳಿಂಗನಹಳ್ಳಿ ಬಿಲಗುಂದ ಸೋಮನಹಳ್ಳಿ ಅಮ್ಮನಜಾತ್ರೆ ಹುಲ್ಲನಹಳ್ಳಿ ಮಾಯಮ್ಮನ ಜಾತ್ರೆ ತೂಬಿನಕೆರೆ ಪಟ್ಟಣಜಾತ್ರೆ ನಾಗನಕರೆ ಗುಡ್ಡದಜಾತ್ರೆ ಮುದ್ದಿನಹಳ್ಳಿ ಜಾತ್ರೆಹರಕಲ್ ಹನುಮಂತರಾಯನಜಾತ್ರೆ ಹುಲಿಕೆರೆಜಾತ್ರೆ ಮತ್ತು ಗಂಡಕಲ್ ಜಾತ್ರೆ	0 0 8	0 0 4	
	ನಾಗಮಂಗಲತಾಲ್ಲೂಕು ಚುಚ್ಚಿಂಗಿರಿಜಾತ್ರೆ	0 1 0	0 0 4	

ಡಿಸ್ಟ್ರಿಕ್ಟ್	ಸ್ಥಳ	ಬಂದು ಇಂಪೀರಿಯಲ್ ಕ್ವಾರ್ಟ್ರಿಗೆ ಸಮವಾದ ಕೇರು ಬಂದಕ್ಕೆ ಖರೀದಿ. ಉತ್ತಮ.	ಕನಿಷ್ಟ.	ರೊಟ್ಟುಲೇಕಾರಬಾನಿಯ ಪರಿಗೆ ಕೇರು ಬಂದಕ್ಕೆ ಖರೀದಿ.
ಮೈಸೂರು.	ಎಡತೊರೆ ಕಸಬ	0 0 10	0 0 6	
	ಎಡತೊರೆ ತಾಲ್ಲೂಕಿನ ಚಂಬಿನಕಟ್ಟೆ ಮತ್ತು ಕಪಡಿ ಜಾತೆಗಳಲ್ಲಿ	0 0 10	0 0 8	
	ಡಿಟೋ ತಾಲ್ಲೂಕು ತಂದ್ರಿ	0 0 8	0 0 6	
	ಡಿಟೋ ತಾಲ್ಲೂಕ ಹಂಪಾಪುರ ಸಿಪ್ಪೂರು ಸಾಲಗ್ರಾಮ ದೊರ್ನಹಳ್ಳಿ ಬಳ್ಳಳ್ಳಿ ಬ್ಯಾಡರಹಳ್ಳಿ ಈ ಗ್ರಾಮಗಳಲ್ಲಿ	0 0 10	0 0 6	
	ಮಳವಳ್ಳಿ ತಾಲ್ಲೂಕಿಗೆ ಕೇರಿದ ಹಲಗೂರು ದಳವಾಯಿಕೋಡಿಹಳ್ಳಿ ಹರಿಹರ ವಾಂಗಾಡನಹಳ್ಳಿ ಮತ್ತು ಬಾಣಸಮುದ್ರ ಎಂಬುವ ಗ್ರಾಮಗಳಲ್ಲಿ	0 0 8	0 0 4	
	ಮಂಡ್ಯದ ಕಸಬ	0 0 10	0 0 6	
	ಮಂಡ್ಯದ ತಾಲ್ಲೂಕು ಚಿಕ್ಕಮಂಡ್ಯ ಸಾತನೂರ ಕಟ್ಟೆಹಳ್ಳಿ ಪನಕನಹಳ್ಳಿ ಈ ಗ್ರಾಮಗಳಲ್ಲಿ	0 0 10	0 0 6	
	ನಂಜನಗೂಡು ಕಸಬ	0 0 10	0 0 4	
	ನಂಜನಗೂಡು ತಾಲೂಕು ದ್ಯಾವರಸನಹಳ್ಳಿ ಪೆಪ್ಪನಹಳ್ಳಿ ಕುಂಬಳ್ಳಿ ದಿಬ್ಬೂರು ಚಿಕ್ಕಯ್ಯನಛತ್ರ ತೋರೆಮಾವು ಮಲ್ಲೂರು ನರಸೀಪುರ ಗನತಗಾಲ ಕುಪ್ಪೆ ಲಗುರಹುಂಡಿ ಮಾಜನಹಳ್ಳಿ ಮತ್ತು ತಿಂಗರಿಪುರ ಈ ಗ್ರಾಮಗಳಲ್ಲಿ	0 0 10	0 0 4	
	ಡಿಟೋ ತಾಲೂಕು ಇತರ ಎಲ್ಲಾ ಗ್ರಾಮಗಳಲ್ಲಿ	0 0 6	0 0 3	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟ್ ಮಜಕೂರ್ ಇತರ ಎಲ್ಲಾ ಕಸಬೆ ಗ್ರಾಗಳಲ್ಲಿಯೂ	0 0 10	0 0 6	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟ್ ಮಜಕೂರ್ ಇತರ ಎಲ್ಲಾ ಗ್ರಾಮ ಗಳಲ್ಲಿಯೂ	0 0 6	0 0 4	
ಹಾಸನ.	ಹಾರ್ನಟರ್ವ	0 1 0	0 0 10	
	ಅರಕಲಗೂಡು ಕಸಬ	0 1 4	0 1 0	
	ಇತರ ತಾಲೂಕು ಕಸಬಾಗಳು	0 1 0	0 0 6	
	ಬೇಲೂರು ತಾಲೂಕು ಗ್ರಾಮಗಳು	0 1 0	0 0 6	
	ಬೇಲೂರು ಅರಕಲಗೂಡು ಮತ್ತು ಮಂಜರಾಬಾದು ತಾಲೂಕು ಗ್ರಾಮ ಗಳು ವಿನಾಯಿನ ಇತರ ಗ್ರಾಮಗಳಲ್ಲಿ	0 0 6	0 0 4	
	ಮಂಜರಾಬಾದು ತಾಲೂಕಿನ ಸಕಲೇಶಪುರ ಸುಂಡೇಕೆರೆ ಬೆಳಗೋಡು ಬಳ್ಳು ಹೊ ಸಕೋಟೆ ಮೊಸ್ಲೆ ಶುಕ್ರವಾರಸಂತೆ ಮತ್ತು ಕಿರೋಡಿ ಎಂಬ ಗ್ರಾಮಗಳಲ್ಲಿ	0 1 0	0 0 8	
	ಅರಕಲಗೂಡು ತಾಲೂಕಿನ ಕೋಣನೂರು ಗುರುವಾರಸಂತೆ ಮಾರೂರು ಸಂತೆ ಮಾಲಾಪಟ್ಣ ರಾಮನಾಥಪುರ ಮತ್ತು ಇತರ ಗ್ರಾಮದ ಜಾತ್ರೆಗಳಲ್ಲಿ	0 1 4	0 1 0	
	ಡಿಟೋ ತಾಲೂಕುಮಗಳ ಸೋಮವಾರಸಂತೆ ಬನ್ನೂರು ಬುಧವಾರಸಂತೆ ಮಗಳಲ್ಲಿ	0 1 4	0 0 9	
	ಡಿಟೋ ತಾಲೂಕು ಕೋಣನೂರು ಗ್ರಾಮದಲ್ಲಿ	0 1 2	0 0 9	
	ಡಿಟೋ ತಾಲ್ಲೂಕುಮಗ್ಗೆ ರಾಮನಾಥಪುರ ಮತ್ತು ಕಟ್ಟೆಪುರ ಗ್ರಾಮಗಳಲ್ಲಿ	0 1 0	0 0 9	
	ಡಿಟೋ ತಾಲೂಕು ಬಸವಾಪಟ್ಣ ಕಂಗಳಲಮರಟ ಮತ್ತು ಕಡಿವಿನಹೊಸ ಹಳ್ಳಿ ಗ್ರಾಮಗಳಲ್ಲಿ	0 1 0	0 0 8	
	ಡಿಟೋ ತಾಲ್ಲೂಕು ರುದ್ರಾಪಟ್ಣ ಮತ್ತು ಕಾರಳಾಪುರ ಗ್ರಾಮಗಳಲ್ಲಿ	0 0 10	0 0 8	
	ಡಿಟೋ ತಾಲ್ಲೂಕು ಧರ್ಮಾಪುರ ನರಸಕುಪ್ಪೆ ಎಲ್ಲಹಳ್ಳಿ ಮಗನಹಳ್ಳಿ ಮರಟ ಮತ್ತು ಹುಲಿಕಲ್ಲು ಗ್ರಾಮಗಳಲ್ಲಿ	0 0 10	0 0 6	
	ಡಿಟೋ ತಾಲ್ಲೂಕು ಉಲ್ಲಿಹೊಸೂರು ಉಕ್ಕಡ ಮತ್ತು ಗಂಗೂರು ಮರಟ ಗ್ರಾಮಗಳಲ್ಲಿ	0 0 8	0 0 6	
ಹಾಸನ.	ಕೊಪ್ಪ ಮತ್ತು ನೂಡಿಗೆರೆ ತಾಲ್ಲೂಕು ಕಸಬಾ ಮತ್ತು ಗ್ರಾಮಾಂತ್ರಗಳಲ್ಲಿ	0 1 6	0 0 6	
	ಇತರ ತಾಲ್ಲೂಕು ಕಸಬಾಗಳಲ್ಲಿ	0 1 4	0 0 6	
	ಇತರ ಗ್ರಾಮಗಳಲ್ಲಿ	0 1 0	0 0 6	
ಶಿವಮೊಗ್ಗ	ಶಿವಮೊಗ್ಗ ಟರ್ವ	0 1 6	0 1 0	
	ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳು	0 1 0	0 0 6	
	ಡಿಸ್ಟ್ರಿಕ್ಟಿನ ಇತರ ಎಲ್ಲಾ ಭಾಗಗಳಲ್ಲಿ	0 1 6	0 0 6	
ಚಿತ್ರದುರ್ಗ	ತಾಲ್ಲೂಕು ಕಸಬಾಗಳಲ್ಲಿ ಮತ್ತು ಗ್ರಾಮಗಳಲ್ಲಿ	0 1 0	0 0 6	

ಹುಕುಂ ಬಮೋಜೇಬ್,
ಸ. ಕ್ರೀನಿವಾಸಯ್ಯಂಗಾರ್ ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರೆಟರಿ.